ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	19 (266)
2.	ಸದಸ್ಯರ ಹೆಸರು	:	ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3.	ಉತ್ತರಿಸುವ ದಿನಾಂಕ	:	22.09.2020
4.	ಉತ್ತರಿಸುವ ಸಚಿವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಕೋಲಾರ ಜಿಲ್ಲೆಯಲ್ಲಿ K.I.A.D.B.ಯಿಂದ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ವಲಯಗಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)	ಕೋಲಾರ ಜಿಲ್ಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳ ವಿವರ ಈ ಕೆಳಕಂಡಂತಿದೆ:-

ಕ್ರ ಸಂ	ಕೈಗಾರಿಕಾ ಪ್ರದೇಶ	ವಿಸ್ತೀರ್ಣ (ಎ-ಗು)
1.	ನರಸಾಪುರ	700.75
2.	ಜಕ್ಕಸಂದ್ರ	627.45
3.	ವೇಮಗಲ್	666.41
4.	ಮಾಲೂರು 1 ಮತ್ತು 2ನೇ ಹಂತ	210.00
5.	ಮಾಲೂರು 3ನೇ ಹಂತ	295.00
6.	ಮಾಲೂರು 4ನೇ ಹಂತ	412.00
7.	ಟಮಕ	117.01
8.	ಬಂಗಾರಪೇಟೆ	88.00

<table>
<tr>
<td>ಅ.</td>
<td>ಈ ಜಿಲ್ಲೆಯಲ್ಲಿ ಹೊಸ ಕೈಗಾರಿಕಾ ವಲಯಗಳಗೋಸ್ಕರ ಅಧಿಸೂಚನೆ ಹೊರಡಿಸಿರುವ ಜಮೀನುಗಳ ವಿಸ್ತೀರ್ಣ ಎಷ್ಟು; ಮತ್ತು ಅವು ಯಾವುವು (ವಿವರಗಳನ್ನು ನೀಡುವುದು)</td>
<td>ಕೋಲಾರ ಜಿಲ್ಲೆಯಲ್ಲಿ ಹೊಸ ಕೈಗಾರಿಕಾ ಪ್ರದೇಶಗಳಗಾಗಿ ಜಮೀನನ್ನು ಭೂಸ್ವಾಧೀನಪಡಿಸಲು ಅಧಿಸೂಚನೆ ಹೊರಡಿಸಿರುವ ವಿವರ ಈ ಕೆಳಕಂಡಂತಿದೆ:-
<table>
<tr><th>ತಾಲ್ಲೂಕು</th><th>ಗ್ರಾಮ</th><th>ಅಧಿಸೂಚನೆ ದಿನಾಂಕ</th><th>ವಿಸ್ತೀರ್ಣ (ಎ-ಗು)</th><th>ಷರಾ</th></tr>
<tr><td>ಮಾಲೂರು (ನರಸಾಪುರ 2ನೇ ಹಂತ)</td><td>ಮಿಂಡಹಳ್ಳಿ</td><td>ಅಂತಿಮ ಅಧಿಸೂಚನೆ 12.08.2020</td><td>335-16</td><td>ಪ್ರತಿ ಎಕರೆಗೆ ರೂ.1.05 ಕೋಟಿ ಭೂಪರಿಹಾರ ದರ ನಿಗಧಿಯಾಗಿದೆ.</td></tr>
<tr><td>ಕೋಲಾರ (ವೇಮಗಲ್ ಕೈಗಾರಿಕಾ ಪ್ರದೇಶ 2ನೇ ಹಂತ)</td><td>ಹಾರ್ಜೇನಹಳ್ಳಿ ಗುಡಿಗೊಂಡನಹಳ್ಳಿ ಮಲಿಯಪ್ಪನಹಳ್ಳಿ ಕುರುಗಲ್</td><td>ಪ್ರಾಥಮಿಕ ಅಧಿಸೂಚನೆ 12.08.2020</td><td>511-12</td><td>ಕಲಂ 28(3)ರ ವಿಚಾರಣೆ ಮತ್ತು ಜಂಟಿ ಅಳತೆ ಕಾರ್ಯ ಪ್ರಗತಿಯಲ್ಲಿದೆ.</td></tr>
</table>
</td>
</tr>
<tr>
<td>ಇ.</td>
<td>K.G.F.ನಲ್ಲಿರುವ B.G.M.L.ಗೆ ಸೇರಿದ ಜಮೀನಿನಲ್ಲಿ ಕೈಗಾರಿಕಾ ವಸಾಹತುಗಳನ್ನು</td>
<td>ರಾಜ್ಯ ಸರ್ಕಾರವು BGML ನ ಕೈಗಾರಿಕಾ ಅಭಿವೃದ್ಧಿಗೆ ಯೋಗ್ಯವಿರುವ ಯಾವುದೇ ಋಣಭಾರವಿಲ್ಲದ / ತಕರಾರು ಇಲ್ಲದ ಭೂಮಿಯಲ್ಲಿ ಕೈಗಾರಿಕಾ ಟೌನ್ ಶಿಪ್ ಅಭಿವೃದ್ಧಿಪಡಿಸುವ ಬಗ್ಗೆ ತೀರ್ಮಾನಿಸಿ, ಭಾರತ ಸರ್ಕಾರದ ಗಣಿ ಸಚಿವಾಲಯಕ್ಕೆ ಯಾವುದೇ ಋಣಭಾರವಿಲ್ಲದ / ತಕರಾರು ಇಲ್ಲದ ಭೂಮಿಯನ್ನು ನೀಡುವಂತೆ ಕೋರಿ ದಿನಾಂಕ:</td>
</tr>
</table>

	ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;	06.02.2019 ಹಾಗೂ 09.07.2020ರ ಪತ್ರದಲ್ಲಿ ಕೋರಲಾಗಿದೆ.
ಈ.	ಹಾಗಿದ್ದಲ್ಲಿ, ಈ ಯೋಜನೆಯ ಸಂಪೂರ್ಣ ವಿವರಗಳನ್ನು ನೀಡುವುದು?	ಭಾರತ್ ಗೋಲ್ಡ್ ಮೈನ್ಸ್ ಲಿ. (BGML)ಗೆ ಸೇರಿದ ಭೂಮಿಯ ಪೈಕಿ ಯಾವುದೇ ಋಣಭಾರವಿಲ್ಲದ ಭೂಪ್ರದೇಶವನ್ನು ಗುರುತಿಸಿ, ಈ ಪ್ರದೇಶದಲ್ಲಿ "ಕೈಗಾರಿಕಾ ನೋಡ್" ಅಭಿವೃದ್ಧಿಪಡಿಸುವ ಸಂಬಂಧ ತಕರಾರು ಇಲ್ಲದ ಜಮೀನನ್ನು ಗುರುತಿಸಲು ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಇವರುಗಳನ್ನು ಒಳಗೊಂಡ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 126 ಎಸ್.ಪಿಕ್ಯೂ 2018, ದಿನಾಂಕ: 28.01.2019ರನ್ವಯ ರಚಿಸಲಾಗಿದೆ. ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಇವರ ಉಸ್ತುವಾರಿಯಲ್ಲಿ B.G.M.L. ಪ್ರದೇಶದ ಡ್ರೋನ್ ಸರ್ವೆ ಕಾರ್ಯ ನಡೆಸಲಾಗಿದ್ದು, ಸದರಿ ಸರ್ವೆಯನ್ವಯ B.G.M.L.ನ ಸುಮಾರು 3212 ಎಕರೆ ಕೈಗಾರಿಕಾ ಅಭಿವೃದ್ಧಿಗೆ ಯೋಗ್ಯವಿರುವ ಖಾಲಿ ಜಮೀನನ್ನು ಕೈಗಾರಿಕಾ ನೋಡ್.ಗಾಗಿ ಗುರುತಿಸಲಾಗಿದೆ. ದಿನಾಂಕ: 28.08.2020ರಂದು ಮಾನ್ಯ ಮುಖ್ಯಮಂತ್ರಿಯವರು ಭಾರತ ಸರ್ಕಾರದ ಮಾನ್ಯ ಗಣಿ, ಕಲ್ಲಿದ್ದಲು ಹಾಗೂ ಸಂಸದೀಯ ವ್ಯವಹಾರಗಳ ಸಚಿವರೊಂದಿಗೆ ಸಭೆ ನಡೆಸಿದ್ದು, ಸಭೆಯಲ್ಲಿ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ: **1) Exploration survey be taken up by the Mineral Exploration Corporation Ltd. (MECL) at their cost to be completed within six months of the entire unexplored area of BGML.** **2) The State Government to take up total station survey of the entire BGML land to be completed within three months.**

		3) **If the land identified to be not suitable for mineral exploitations, the same would be considered for grant to the State Government for development of Industrial Township to the extent of clear vacant land.** ಮೇಲ್ಕಂಡ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಂತೆ, **MECL** ರವರು ಎಕ್ಸ್.ಪ್ಲೋರೇಷನ್ ಸರ್ವೆ ಮುಗಿಸಿದ ನಂತರ, ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಸಿಐ 154 ಐಎಪಿ (ಇ) 2020

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು